ಸಾಕ್ಷಿಗೆ ದಿನಾಂಕ 22-12-2023 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 1 P.W.: 2

ಪಾಟೀ ಸವಾಲು. ೨ ಮತ್ತು ೩ ನೇ ಆರೋಪಿತರ ಪರ ಶ್ರೀ ಪಿ ಆರ್ ವಕೀಲರಿಂದಃ-

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಘಟನಾ ದಿನ ನಾವು ಹೂವಿನ ಹಡಗಲಿಯಿಂದ ಕೊಟ್ಟೂರಿಗೆ ಹೋಗುತ್ತಿದ್ದೆವು. ಘಟನೆ ನಡೆದಾಗ ಸಮಯ ರಾತ್ರಿ 3 ಗಂಟೆಯಾಗಿತ್ತು. ರಾತ್ರಿ 3 ಗಂಟೆ ಎಂದರೆ ಸಾಮಾನ್ಯವಾಗಿ ಕತ್ತಲೆಯಾಗಿರುತ್ತದೆಂದರೆ ಸರಿ. ಕತ್ತಲಲ್ಲಿ ಸಾಮಾನ್ಯವಾಗಿ ವ್ಯಕ್ತಿಗಳನ್ನು ಗುರುತಿಸಲು ಆಗುವುದಿಲ್ಲವೆಂದರೆ ಸರಿ. ನನ್ನ ಬಳಿ ಹಣ ಇದ್ದಂತಹ ಹಣದ ಮುಖಬೆಲೆಯನ್ನು ಹೇಳಲಾಗುವುದಿಲ್ಲ. ಯಾವ ಯಾವ ಆರೋಪಿತರು ಎಷ್ಟು ಹಣವನ್ನು ಕಿತ್ತುಕೊಂಡರೆಂದು ನನಗೆ ಹೇಳಲಾಗುವುದಿಲ್ಲ. ಪೋಲೀಸರು ಹೇಳಿದ ಮೇರೆಗೆ ನಾನು ನಿಪಿ-4 ರ ಹೇಳಿಕೆಯಲ್ಲಿ ನಾನು ಸಹಿ ಮಾಡಿರುತ್ತೇನೆಂದರೆ ಸರಿ, ನಿಪಿ-4 ರ ಹೇಳಿಕೆಯಲ್ಲಿ ಬರೆದಿರುವಂತಹ ಮಾಹಿತಿಯು ನನಗೆ ಗೊತ್ತಿರುವುದಿಲ್ಲವೆಂದರೆ ಸರಿ. ನಿಪಿ-5 ರ ಪಂಚನಾಮೆಯಲ್ಲಿ ಬರೆದಿರುವಂತಹ ಮಾಹಿತಿ ನನಗೆ ಹೇಳಲಾಗುವುದಿಲ್ಲವೆಂದರೆ ಸರಿ. ನಿಪಿ-5 ರ ಪಂಚನಾಮೆಯಲ್ಲಿ ಪೋಲೀಸರು ಸಹಿ ಮಾಡು ಅಂತಾ ಹೇಳಿದ್ದು ನಾನು ಸಹಿ ಮಾಡಿರುತ್ತೇನೆಂದರೆ ಸರಿ. ನನ್ನ ಜೊತೆ ನಿಪಿ-5 ರ ಪಂಚನಾಮೆಯಲ್ಲಿ ಯಾರ್ಯಾರು ಸಹಿ ಮಾಡಿದರೆಂದು ಹೇಳಲು ಆಗುವುದಿಲ್ಲ. ನಿಪಿ-6 ರ ನಕಾಶೆ ಬಗ್ಗೆ ನನಗೆ ಸರಿಯಾದ ಮಾಹಿತಿ ಇಲ್ಲವೆಂದರೆ ಸರಿ. ನಿಪಿ-2 ಮತ್ತು 3 ರ ಪೋಟೋಗಳನ್ನು ಯಾರಾದರೂ ಸೃಷ್ಟಿ ಮಾಡಬಹುದು ಎಂದರೆ ಸರಿ. ಕೆಲವೊಂದು ಖಾಲಿ ಹಾಳೆಗಳಿಗೆ ಪೋಲೀಸರು ನನ್ನ ಸಹಿ ಪಡೆದುಕೊಂಡಿರುತ್ತಾರೆಂದರೆ ಸರಿ.

ನಾನು ಪೋಲೀಸರ ಸಮಕ್ಷಮ ಹೇಳಿಕೆ ಮತ್ತು ಮರುಹೇಳಿಕೆ ಕೊಟ್ಟಿದ್ದು ಅದರ ಬಗ್ಗೆ ಈಗ ಹೇಳಲಾಗುವುದಿಲ್ಲ. ಜಪ್ತುಪಡಿಸಿಕೊಂಡ ಮೊಬೈಲ್ ನಂಬರ್ ಮತ್ತು ಕಂಪನಿಯ ಹೆಸರನ್ನು

ಹೇಳಲಾಗುವುದಿಲ್ಲ. ಸದರಿ ಪ್ರಕರಣಕ್ಕೂ, ಆರೋಪಿತರಿಗೂ ಯಾವುದೇ ಸಂಬಂಧವಿಲ್ಲವೆಂದರೆ ಸರಿ. ನಾನು ಪೋಲೀಸರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

4 ನೇ ಆರೋಪಿತನ ಪರ ವಕೀಲರ 2 ಮತ್ತು 3 ನೇ ಆರೋಪಿತರ ಪರ ವಕೀಲರು ಮಾಡಿದಂತಹ ಪಾಟೀ ಸವಾಲಿನ ಅಂಶವನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ